# ಆಹಾ ಸುದ್ದಿ!

★ ಸಸಿತೋಟ

ಮೈನ್ಮಾರ್‌ನ ಲಂಬೂ ವಿನ್ ಝಾ ಊ ಎತ್ತರ 7.5 ಅಡಿ. ಈತನ ಪಾದಕ್ಕೆ ಸರಿಯಾದ ಶೂ ತಯಾರು ಮಾಡುವವರಿಲ್ಲದೇ ಬರಿಗಾಲಿನಲ್ಲಿ ಓಡಾಡುತ್ತಿದ್ದನಂತೆ. ಜರ್ಮನಿಯ ಶೂ ತಯಾರಿಕಾ ಕಂಪೆನಿ ಜಿಯೋರ್ಗ್ ವೆಸ್ಸೆಲ್ಸ್ ಈತನಿಗೆ ಶೂಗಳನ್ನು ಉಡುಗೊರೆಯಾಗಿ ನೀಡಿದ್ದು ಬರಿ ಪಾದಗಳಿಗೆ ಕೊನೆಗೂ ಮುಕ್ತಿ ನೀಡಿದೆ.



ಕೆನ್ಯಾದ ಕೋರ್ಟಿನಲ್ಲಿ ಪ್ರಕರಣಗಳ ಸಂಖ್ಯೆ ಎಷ್ಟಿದೆಯೆಂದರೆ ನ್ಯಾಯಾಧೀಶರೊಬ್ಬರಿಗೆ ಬೇಸರ ಬಂದು ಕೋರ್ಟಿಗೆ ಬರುವ ಬದಲು ಮಾಟಗಾರರ ಬಳಿ, ಜ್ಯೋತಿಷಿಗಳ ಹತ್ತಿರ ಹೋಗಿ ಎಂದು ಆದೇಶ ನೀಡಿದ್ದಾರಂತೆ. 'ಕೋರ್ಟಿನಲ್ಲಿ ನೋಡಿಕೊಳ್ಳುತ್ತೇನೆ' ಎಂದು ಅಲ್ಲಿಗೆ ಬರುವವರ ಸಂಖ್ಯೆ ಜಾಸ್ತಿ ಇರುವುದು ಸಹಜ ಬಿಡಿ. ಇನ್ನು ಮುಂದೆ 'ಮಾಟಗಾರ/ ಮಾಟಗಾರ್ತಿಯ ಮುಂದೆ ನೋಡಿಕೊಳ್ಳುತ್ತೇನೆ' ಎಂದು ಶಪಥ ಮಾಡಿದರೆ ಆಯ್ತು. ಎಷ್ಟು ಸುಲಭ ಅಲ್ಲವೇ?

ಅಮೆರಿಕನ್ನರಿಗೆ ಬಹಳ ಹಿಂದಿನಿಂದಲೇ ಇದೆ ಯೋಗದ ಆಕರ್ಷಣೆ. ಆದರೆ ಈಗ ಅದು ಹುಚ್ಚಿನ ಮಟ್ಟಕ್ಕೇರಿದೆ ಎಂಬುದು ಈ ಚಿತ್ರ ನೋಡಿದರೆ ಗೊತ್ತಾಗಿಬಿಡುತ್ತದೆ. ನ್ಯೂಯಾರ್ಕ್‌ನಲ್ಲಿ ಯೋಗ ಗುರು ಅಲಿಸನ್ ಡೆಲ್ಲಿಮೋರ್ ನಗ್ನ ಯೋಗ ಹೇಳಿಕೊಟ್ಟು ಹಣ ಮಾಡುತ್ತಿದ್ದಾನಂತೆ. ಯೋಗದ ಆಳಕ್ಕೆ ಇಳಿಯುವುದೆಂದರೆ ಬೆತ್ತಲಾಗುವುದು. ಬೆತ್ತಲೆಯ ಮೂಲಕವೇ ಶಾರೀರಿಕ ಮೋಹವನ್ನು ಮೀರಬಹುದು ಎಂದೆಲ್ಲ ಹೇಳಿಕೊಂಡು ಜನಬಲ, ಧನಬಲ ಎರಡನ್ನೂ ಕ್ರೋಢೀಕರಿಸುತ್ತಿದ್ದಾನಂತೆ. ಈ ಎರಡೂ ಬಲಗಳಿಗಿಂತ ದೇಹಬಲವೇ ಹೆಚ್ಚು ಎಂಬುದನ್ನು ಖಂಡಿತವಾಗಿ ಹೇಳಬಹುದು.



ಎಟಿಎಂ ಅಂದರೆ ಎನಿಟೈಮ್ ಮನಿ. ಆದರೆ ನ್ಯೂಯಾರ್ಕ್‌ನಲ್ಲಿ ಕಪ್ ಕೇಕ್ ಎಟಿಎಂ ಶುರುವಾಗಿದೆ. ಕಪ್ ಕೇಕ್ ಪ್ರಿಯರು ಈ ಎಟಿಎಂ ಮಷೀನ್‌ಗಳಿಂದ ನಾಲಿಗೆ ಬಯಸಿದಾಗಲೆಲ್ಲ ಕಪ್ ಕೇಕ್ ಉದುರಿಸಿಕೊಂಡು ಸವಿಯಬಹುದು. ಭಾರತಕ್ಕೂ ಸದ್ಯವೇ ಬರಬಹುದು. ಕೇಕ್ ಕಳ್ಳರೂ ರೆಡಿ ಆಗಬಹುದು.




ಓಹಿಯೋದ ಅಗ್ನಿಶಾಮಕ ದಳದ ಉದ್ಯೋಗಿ ಜಸ್ಟಿನ್ ತನ್ನ ಸ್ನೇಹಿತೆ ಮೇಗಾನ್‌ಗೆ 'ಮದುವೆಯಾಗುತ್ತೀಯಾ ನನ್ನನ್ನು?' ಎಂದು ಕೇಳಿದ್ದು ಬೆಂಕಿಯನ್ನು ಆರಿಸುವ ಪ್ರಕ್ರಿಯೆ ಮಧ್ಯೆ ಅಂತೆ. ಆದರೆ ಈ ರೀತಿ ಕೇಳುವ ಸಲುವಾಗಿಯೇ ಆತನ ಸಹೋದ್ಯೋಗಿಗಳು ನಕಲಿ ಬೆಂಕಿ ಆರಿಸುವ ಕಾರ್ಯ ಏರ್ಪಡಿಸಿದ್ದು, ಎಲ್ಲವೂ ಸಾಂಗವಾಗಿ ನೆರವೇರಿತಂತೆ. ಮೇಗಾನ್ ನಿರಾಕರಿಸಿದ್ದರೆ... ಹೃದಯಕ್ಕೆ ಪೆಟ್ಟಾದ ಜಸ್ಟಿನ್ ಬೆಂಕಿಗೆ ಹಾರುವ ಕಾರ್ಯಕ್ರಮ ಇಟ್ಟುಕೊಂಡಿದ್ದರೆ... ಅದನ್ನೂ ನಕಲಿಯಾಗಿ ಮಾಡಲು ಸಹೋದ್ಯೋಗಿಗಳು ಸಿದ್ಧತೆ ಮಾಡಿಕೊಂಡಿರಬಹುದು.

ಪ್ರತಿ ವರ್ಷ ರಿಪ್ಲೇಸ್ ಬಿಲೀವ್ ಇಟ್ ಆರ್ ನಾಟ್ 'ಅತ್ಯಂತ ದುರ್ವಾಸನೆಯ ಶೂ' ಸ್ಪರ್ಧೆಯನ್ನು ಏರ್ಪಡಿಸುತ್ತದೆ. ಈ ವರ್ಷ ಇದರಲ್ಲಿ ನ್ಯೂ ಮೆಕ್ಸಿಕೋದ ಪುಟಾಣಿ ಜೋರ್ಡಾನ್ ಗೆದ್ದಿದ್ದಾಳಂತೆ. ಎರಡು ವರ್ಷಗಳಿಂದ ಅದೇ ಶೂಗಳನ್ನು ಧರಿಸಿ ಶಾಲೆ, ಆಟ, ಕೊನೆಗೆ ನಿದ್ರೆ ಕೂಡಾ ಮಾಡುತ್ತಿದ್ದಾಳಂತೆ. ಆಕೆಯೇನೋ ಅವಳ ಶೂ, ದುರ್ವಾಸನೆ ಸಹಿಸಿಕೊಂಡಳು. ಆದರೆ ಸ್ಪರ್ಧೆಯಲ್ಲಿದ್ದ ನಿರ್ಣಾಯಕರು! ಎಚ್ಚರ ತಪ್ಪಿ ಬೀಳುವುದೊಂದು ಬಾಕಿ. ಅದಕ್ಕೇ ಹತ್ತಿರದಲ್ಲಿ ಆಮ್ಲಜನಕದ ಸಿಲಿಂಡರ್ ಇಟ್ಟುಕೊಂಡಿದ್ದರಂತೆ.

